ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ, ಲೋಕೋಪಯೋಗಿ ಮತ್ತು ಇಂಧನ ಖಾತೆ ಸಚಿವರು).— ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಹೇಳಿಕೆಯನ್ನು ತಮ್ಮ ಅಪ್ಪಣೆ ಪಡೆದು ಓದುತ್ತೇನೆ.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ದಿನಾಂಕ ೩೧ನೇ ಮಾರ್ಚ್ ೧೯೮೯ರಲ್ಲಿ ೨೨.೯೬೪ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಸಲಾಗಿತ್ತು. ಈ ಸಾಲಿನಲ್ಲಿ (೧೯೮೯-೯೦) ಫೆಬ್ರುವರಿ ೧೯೯೦ರ ಅಂತ್ಯದ ವರೆಗೆ ೨೧೨ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಲಾಗಿದೆ. ಈ ಸಾಲಿನ ಗುರಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ೫೫೦ ಆಗಿದ್ದಿತು. ೨೮ನೇ ಫೆಬ್ರುವರಿ ೧೯೯೦ರಲ್ಲಿರುವಂತೆ ಈ ತಾಲ್ಲೂಕಿನಲ್ಲಿ ಒಟ್ಟು ೩,೧೭೬ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಸಲಾಗಿದೆ. ಫೆಬ್ರುವರಿ ೧೯೯೦ರ ಅಂತ್ಯದ ವೇಳೆಗೆ ಈ ತಾಲ್ಲೂಕಿನಲ್ಲಿ ೩೭೩ ನೀರಾವರಿ ಪಂಪುಸೆಟ್ಟುಗಳ ಅರ್ಜಿಗಳು ಬಾಕಿ ಉಳಿದಿದ್ದು, ಇವುಗಳ ಪೈಕಿ ೩೧೫ ಅರ್ಜಿಗಳು ಮಂಡಳಿಯ ಕ್ರಮಕ್ಕಾಗಿ ಬಾಕಿ ಉಳಿದಿದ್ದವು.

ಮಂಡಳಿಯು ರೈತರ ಪಂಪುಸೆಟ್ಟುಗಳಿಗೆ ವಿದ್ಯುತ್ತನ್ನು ಸರ್ಕಾರವು ಅಂಗೀಕರಿಸುವ ರೋಸ್ಟರ್ ಪದ್ಧತಿಯಲ್ಲಿ ಪೂರೈಸುತ್ತಿದೆ. ಈ ರೋಸ್ಟರ್ ವ್ಯವಸ್ಥೆಯು ವಿದ್ಯುಚ್ಛಕ್ತಿ ಪೂರೈಕೆಗಾಗಿ ಬೇಕಾಗಿರುವ ಕಂಬಿಗಳ ಸಂಖ್ಯೆಯನ್ನು ಅವಲಂಬಿಸಿರುತ್ತದೆ. ಹೆಚ್ಚು ಕಂಬಿಗಳು ಬೇಕಾದಲ್ಲಿ ವಿದ್ಯುತ್ ಪೂರೈಕೆಗಾಗಿ ಹೆಚ್ಚು ಸಮಯ ಬೇಕಾಗುತ್ತದೆ. ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ನೂರು ಬಾವಿ ಯೋಜನೆಯಡಿಯಲ್ಲಿ ನೊಂದಾಯಿಸಿರುವ ಅರ್ಜಿದಾರರನ್ನು ಈ ರೋಸ್ಟರ್ ವ್ಯವಸ್ಥೆಯಿಂದ ತೆಗೆಯಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅರ್ಜಿದಾರರಿಗೆ ಪ್ರಥಮ ಆದ್ಯತೆಯನ್ನೂ ಮತ್ತು ನೂರು ಬಾವಿ ಯೋಜನೆಯಲ್ಲಿನ ಅರ್ಜಿದಾರರಿಗೆ ನಂತರದ ಆದ್ಯತೆಯನ್ನೂ ನೀಡಲಾಗಿದೆ. ಉಳಿದವರಿಗೆ ರೋಸ್ಟರ್‌ನಲ್ಲಿರುವ ಹಿರಿತನದ ಮೇರೆಗೆ ವಿದ್ಯುತ್ ಪೂರೈಸಲಾಗುವುದು.

ರಾಜ್ಯದಲ್ಲಿ ಪ್ರತಿ ವರ್ಷವೂ ಸುಮಾರು ೬೦,೦೦೦ ರಿಂದ ೭೦,೦೦೦ದವರೆಗೆ ಪಂಪುಸೆಟ್ಟುಗಳಿಗಾಗಿ ಹೊಸ ಅರ್ಜಿಗಳು ನೋಂದಾಯಿತವಾಗುತ್ತಿವೆ. ರಾಜ್ಯದಲ್ಲಿ ೩೧ನೇ ಜನವರಿ ೧೯೯೦ ರಲ್ಲಿರುವಂತೆ ೬೩,೬೧೯ ಅರ್ಜಿಗಳು ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಲು ಬಾಕಿ ಉಳಿದಿದ್ದವು ಇವುಗಳ ಪೈಕಿ ೫೯,೬೫೨ ಅರ್ಜಿಗಳು ಮಂಡಳಿಯ ಕ್ರಮಕ್ಕಾಗಿ ಬಾಕಿ ಇದ್ದವು. ಮಂಡಳಿಯು ಲಭ್ಯವಿರುವ ಆರ್ಥಿಕ ಸಂಪನ್ಮೂಲಗಳನ್ನು ಅವಲಂಬಿಸಿ, ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣಕ್ಕೆ ಗುರಿಯನ್ನು ನಿಗದಿಪಡಿಸಿರುವುದರಿಂದ, ಗುರಿಮೀರಿದ ಸಾಧನೆಯನ್ನು ಸಾಧಿಸಿ, ಎಲ್ಲಾ ಬಾಕಿ ಉಳಿದ ಅರ್ಜಿದಾರರಿಗೆ ವಿದ್ಯುಚ್ಛಕ್ತಿಯನ್ನು ಒಂದೇ ವರ್ಷದಲ್ಲಿ ಪೂರೈಕೆ ಮಾಡುವುದು ಆರ್ಥಿಕ ಸಂಪನ್ಮೂಲಗಳ ಕೊರತೆಯಿಂದ ಬಹಳ ಕಷ್ಟಕರ.

ಈ ವರ್ಷದ (೧೯೯೦-೯೧)ರ ಅವಧಿಯಲ್ಲಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣಕ್ಕೆ ಬೇಕಾಗುವ ಸಾಮಗ್ರಿಗಳ ಸ್ವಲ್ಪ ಕೊರತೆಯಿದ್ದು, ಈಗ ಅದನ್ನು ನೀಗಿಸಲಾಗಿದೆ. ರಾಜ್ಯದಲ್ಲಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣದ ಗುರಿಯಾದ ೪೦,೦೦೦ವನ್ನು ಸಾಧಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು. ಹಾಗೂ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸಹ ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣಕ್ಕೆ ಬೇಕಾಗಿರುವ ಸಾಮಗ್ರಿಗಳನ್ನು ಈಗಾಗಲೇ ಒದಗಿಸಿರುವುದರಿಂದ ಮಂಡಳಿಯ ಕ್ರಮಕ್ಕಾಗಿ ಬಾಕಿ ಉಳಿದಿರುವ ಎಲ್ಲಾ ಅರ್ಜಿದಾರರಿಗೂ ಶೀಘ್ರದಲ್ಲೇ ಒದಗಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು.

ಪ್ರಕಟಣೆ

ಅಧ್ಯಕ್ಷರು.—ವಿಧಾನಪರಿಷತ್ತಿನ ಸಭಾಪತಿಯವರಿಂದ ಒಂದು ಸಂದೇಶ ಬಂದಿದೆ. ನಿಯಮ ೧೧೪ರ ಮೇರೆಗೆ ಈ ಕೆಳಕಂಡ ವಿಧೇಯಕಗಳನ್ನು ವಿಧಾನಪರಿಷತ್ತಿನಲ್ಲಿ ದಿನಾಂಕ ೩೦-೩-೧೯೯೦ ರಂದು ಅನುಮೋದಿಸಲಾಗಿದೆಯೆಂದು ತಿಳಿಸಿರುತ್ತಾರೆ. ವಿಧೇಯಕಗಳು ಈ ಕೆಳಕಂಡಂತಿವೆ.

ಕರ್ನಾಟಕ ಧನ ವಿನಿಯೋಗ ವಿಧೇಯಕ ೧೯೯೦

೧೯೯೦ನೇ ಇಸವಿಯ ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಕಸಬುಗಳು, ಮತ್ತು ಉದ್ಯೋಗಗಳ ತಿದ್ದುಪಡಿ ವಿಧೇಯಕ

೧೯೯೦ನೇ ಇಸವಿಯ ಕರ್ನಾಟಕ ಕೃಷಿ ವರಮಾನ ತೆರಿಗೆ (ತಿದ್ದುಪಡಿ) ವಿಧೇಯಕ

೧೯೯೦ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ

೧೯೯೦ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ

೧೯೯೦ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರದೇಶದೊಳಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕ

೧೯೯೦ನೇ ಇಸವಿಯ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ)(ತಿದ್ದುಪಡಿ) ವಿಧೇಯಕ

೧೯೯೦ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ಸ್ (ತಿದ್ದುಪಡಿ) ವಿಧೇಯಕ

೧೯೯೦ನೇ ಇಸವಿಯ ಕರ್ನಾಟಕ ಸಂಘಗಳ ನೋಂದಣಿ (ತಿದ್ದುಪಡಿ) ವಿಧೇಯಕ

೧೯೯೦ನೇ ಇಸವಿಯ ಕರ್ನಾಟಕ ಮೋಟಾರು ವಾಹನ ತೆರಿಗೆ (ತಿದ್ದುಪಡಿ) ವಿಧೇಯಕ

ಉಪಾಧ್ಯಕ್ಷರ ಚುನಾವಣೆ

ಅಧ್ಯಕ್ಷರು.—ಉಪಾಧ್ಯಕ್ಷ ಸ್ಥಾನಕ್ಕೆ ಹೆಸರನ್ನು ಸೂಚಿಸಿ ಮೂರು ಪ್ರಸ್ತಾವಗಳು ಬಂದಿವೆ. ಮತ್ತು ಎಸ್.ಹೆಚ್. ಕೌಜಲಗಿಯವರ ಹೆಸರಿನ ಒಂದು ಪ್ರಸ್ತಾವ ಬಂದಿದೆ. ಕಾರ್ಯಕ್ರಮದ ಪಟ್ಟಿಯ ಪ್ರಕಾರ ಅವರವರ ಪ್ರಸ್ತಾವಗಳನ್ನು ಸೂಚಿಸಿ ಅವುಗಳನ್ನು ಅನುಮೋದಿಸಿದ ಪ್ರಸ್ತಾವಗಳಿವೆ ಪ್ರಸ್ತಾವಗಳನ್ನು ಮತಕ್ಕೆ ಹಾಕುತ್ತೇನೆ. ಮೊದಲನೆಯ ಪ್ರಸ್ತಾವನ್ನು ಸಭೆಯು ಅಂಗೀಕರಿಸಿದಲ್ಲಿ ಉಳಿದ ಪ್ರಸ್ತಾವಗಳನ್ನು ಮತಕ್ಕೆ ಹಾಕುವುದಿಲ್ಲ. ಶ್ರೀ ವೀರೇಂದ್ರ ಪಾಟೀಲ್ ಅವರು ಸಭೆಯಲ್ಲಿ ಇಲ್ಲ. ಶ್ರೀ ಕೆ. ಹೆಚ್. ಪಾಟೀಲ್ ಅವರು ಹೆಸರನ್ನು ಸೂಚಿಸಬಹುದು.

ಶ್ರೀ ಕೆ. ಹೆಚ್. ಪಾಟೀಲ್.—"ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ ಅವರನ್ನು ವಿಧಾನ ಸಭೆಯ ಉಪಾಧ್ಯಕ್ಷಣಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ."

ಶ್ರೀಮತಿ ಚಂದ್ರಪ್ರಭ ಅರಸ್.—ಮಾನ್ಯ ಕೆ.ಹೆಚ್. ಪಾಟೀಲ್‌ರವರು ಸೂಚಿಸಿದ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

ಅಧ್ಯಕ್ಷರು.—ಶ್ರೀ ಹುಚ್ಚಮಾಸ್ತಿಗೌಡರು ಸಭೆಯಲ್ಲಿ ಇಲ್ಲ. ಶ್ರೀ ಚಿಂದ್ರೇಗೌಡರು ಈಗ ಹೆಸರನ್ನು ಸೂಚಿಸಬಹುದು.

†**ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).**—ಮಾನ್ಯ ಸಭಾಧ್ಯಕ್ಷರೇ, ನಾನಂ ಸೂಚನೆಯನ್ನೇನೋ ಕಳಿಸಿದ್ದೇನೆ. ಆದರೆ ಈ ವಿಚಾರದಲ್ಲಿ ಒಂದು ಮಾತನ್ನು ತಮಗೆ ಹೇಳಬೇಕಾದದ್ದು ಇದೆ. ಉಪಾಧ್ಯಕ್ಷರ ಸ್ಥಾನದಂಥ ಗೌರವಯುತವಾದ ಸ್ಥಾನದ ಬಗ್ಗೆ ನಮ್ಮನಮ್ಮಲ್ಲಿ ಭಿನ್ನಾಭಿಪ್ರಾಯಗಳು ಕಾಣಬಾರದು. ಆದರೆ ದುರ್ದೈವದಿಂದ ಕರ್ನಾಟಕ ರಾಜ್ಯದ ವಿಧಾನಸಭೆಯ ಇತಿಹಾಸದಲ್ಲೇ ಮೊದಲ ಬಾರಿಗೆ ಆಳುವ ಪಕ್ಷ ತನ್ನ ಸಂಖ್ಯೆಯೇ ದೊಡ್ಡದು ಎಂದು ಸದನದ ಸದಸ್ಯರ ಸಂಬಂಧವನ್ನೇ ಪ್ರಶ್ನೆ ಮಾಡತಕ್ಕಂಥ. ಆಳುವ ಮತ್ತು ವಿರೋಧ ಪಕ್ಷ ಎಂಬ ಪ್ರಬೇಧವನ್ನು ಇಲ್ಲಿ ನಿರ್ಮಾಣ ಮಾಡಿ. ಇಂತಹ ಒಂದು ಅತ್ಯಂತ ಶ್ರೇಷ್ಠವಾದ ಹುದ್ದೆಗೆ ಸೂಚನೆ ಮಾಡುವಾಗ ಸೌಜನ್ಯಕ್ಕಾದರೂ ಪ್ರತಿಪಕ್ಷದ ಮುಖಂಡರನ್ನು ಕೇಳತಕ್ಕಂಥ ಒಂದು ದೊಡ್ಡತನವನ್ನು ಆಪರು ಪ್ರದರ್ಶನ ಮಾಡದೇ ಇರುವುದು ನನ್ನ ಮನಸ್ಸಿಗೆ ತುಂಬ ಖೇದವಾಗಿದೆ. ಇವತ್ತು ಲೋಕಸಭೆಯಲ್ಲಿ ವಿರೋಧಪಕ್ಷಕ್ಕೆ ಉಪಾಧ್ಯಕ್ಷರ ಸ್ಥಾನವನ್ನು ಕೊಟ್ಟಿರುವುದು, ಗುಜರಾತಿನಲ್ಲಿ ವಿರೋಧ ಪಕ್ಷಕ್ಕೆ ಈ ಸ್ಥಾನವನ್ನು ಕೊಟ್ಟಿರುವ ವರದಿಯನ್ನು ನಾವು ನೋಡಿದ್ದೇವೆ. ನಮಗೂ ಇಲ್ಲಿ ಕೊಡಿ ಎಂದು ನಾನು ಭಿಕ್ಷೆ ಬೇಡುತ್ತಿಲ್ಲ. ಆದರೆ ಈ ಒಂದು ಸ್ಥಾನಕ್ಕೆ ಗೌರವ ತುಂಬತಕ್ಕಂಥ, ಎಲ್ಲರೂ ಕ್ಷಿತು ಸಂತೋಷದಿಂದ ಮಾಡತಕ್ಕಂಥ ಕೆಲಸದಲ್ಲಿ, ನಾವು ಕೂಡ ಒಂದು ಠರಾವನ್ನು ಮಂಡನೆ ಮಾಡತಕ್ಕಂಥ ಸ್ಥಿತಿಗೆ ಕೊಂತೊಯ್ದದ್ದು ಈ ಸರ್ಕಾರದ ಒಂದು ಪ್ರವೃತ್ತಿಯಿಂದಾಗಿ ಈ ಒಂದು ಪ್ರವೃತ್ತಿಯನ್ನು ಮುಂದಾವರೂ ಮುಂದುವರೆಸಬಾರದು ಎಂಬ ಪ್ರಾರ್ಥನೆಯನ್ನು ವಿನಮ್ರವಾಗಿ ನಾನು ಸಲ್ಲಿಕೆ ಮಾಡುತ್ತಾ, ತಮ್ಮ ಮೂಲಕ ಮತ್ತೊಂದು ಮನವಿಯನ್ನು ಮಾಡುತ್ತೇನೆ. ಈ ಸದನದ ಸತ್‌ಸಂಪ್ರದಾಯಗಳನ್ನು ಈ ಬಹುದೊಡ್ಡ ದೈತ್ಯಶಕ್ತಿಯನ್ನು ಆಧಾರವಾಗಿಟ್ಟುಕೊಂಡು ನಿರ್ಣಯ ಮಾಡತಕ್ಕಂಥ ಪ್ರವೃತ್ತಿಯನ್ನು ತಾವು ಕೂಡ ಖಂಡಿಸಬೇಕು ಮತ್ತು ಸಭಾನಾಯಕರಿಗೆ ಈ ವಿಚಾರವನ್ನು ತಿಳಿಸಬೇಕೆಂದು ಹೇಳುತ್ತಾ ಈ ಠರಾವನ್ನು ನಾವು ಮಂಡನೆ ಮಾಡುವುದಿಲ್ಲವೆಂದು ಹೇಳುತ್ತೇನೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.